"ಮಧುರ ಮಕ್ಕಳೇ - ಇಡೀ ಕಲ್ಪದಲ್ಲಿ ಅತೀ ದೊಡ್ಡ ವ್ಯಕ್ತಿ ಬ್ರಹ್ಮಾ ಆಗಿದ್ದಾರೆ. ಇವರಲ್ಲಿ ತಂದೆ ಪ್ರವೇಶ ಮಾಡುತ್ತಾರೆ. ಬ್ರಹ್ಮಾರವರನ್ನು ನೀವು ಅನುಕರಣೆ ಮಾಡಬೇಕಾಗಿದೆ"

ಪ್ರಶ್ನೆ: ತಂದೆ ಹಾಗೂ ದಾದಾರವರ ವಿಶೇಷ ಗುಣ ಯಾವುದು, ಯಾವುದನ್ನು ಮಕ್ಕಳು ಧಾರಣೆ ಮಾಡಬೇಕಾಗಿದೆ?

ಉತ್ತರ: ತಂದೆ ನಿರಾಕಾರಿ, ನಿರಹಂಕಾರಿ ಆಗಿದ್ದಾರೆ. ಹಾಗೆ ದಾದಾ (ಬ್ರಹ್ಮಾ) ರವರು ಸಾಕಾರದಲ್ಲಿದ್ದು ಸದಾ ನಿರಹಂಕಾರಿ ಆಗಿದ್ದಾರೆ. ಇಷ್ಟು ದೊಡ್ಡ ವ್ಯಕ್ತಿ ಆದರೂ ಎಷ್ಟು ಸಾಧಾರಣ ಆಗಿದ್ದಾರೆ. ಒಂದು ಕಡೆ ಹೇಳುತ್ತಾರೆ ಇವರು (ಬ್ರಹ್ಮಾ) ಶ್ರೇಷ್ಠಾತಿ ಶ್ರೇಷ್ಠ ವಜ್ರಗಳನ್ನಾಗಿ ಮಾಡುವಂತಹ ತಂದೆಯ ಡಬ್ಬಿ (ಬಾಕ್ಸ್) ಆಗಿದ್ದಾರೆ. ಮತ್ತೆ ಇನ್ನೊಂದು ಕಡೆ ಹೇಳುತ್ತಾರೆ ಇದು ಹಳೆಯದರಲ್ಲಿ ಹಳೆಯ ಲಾಂಗ್ ಬೂಟ್ ಆಗಿದೆ, ಯಾರಲ್ಲಿ ತಂದೆ ಪ್ರವೇಶ ಮಾಡಿದ್ದಾರೆ. ಇಬ್ಬರೂ ಮಕ್ಕಳ ಸೇವೆಯಲ್ಲಿ ಉಪಸ್ಥಿತರಾಗಿದ್ದಾರೆ. ಹಾಗೆ ಮಕ್ಕಳು ಸಹ ತಂದೆಯನ್ನು ಅನುಕರಣೆ ಮಾಡುತ್ತಾ ನಿರಹಂಕಾರಿ ಆಗಿ ಸೇವೆ ಮಾಡಬೇಕಾಗಿದೆ.

ಗೀತೆ: ಓಂ ನಮಃ ಶಿವಾಯ........

ಓಂ ಶಾಂತಿ. ಮಕ್ಕಳು ಯಾರ ಮಹಿಮೆಯನ್ನು ಕೇಳಿದಿರಿ? ಎಲ್ಲಾ ಮಕ್ಕಳು ಹೇಳುತ್ತಾರೆ ಶ್ರೇಷ್ಠಾತಿ ಶ್ರೇಷ್ಠ ಭಗವಂತನ ಮಹಿಮೆ ಇದಾಗಿದೆ. ಅವರ ಹೆಸರೇ ಆಗಿದೆ ಶಿವ. ಶಿವಾಯ ನಮಃ ಎಂದು ಹೇಳುತ್ತಾರಲ್ಲವೇ. ಇದನ್ನು ಭಾರತವಾಸಿಗಳು ತಿಳಿದುಕೊಂಡಿದ್ದಾರೆ ಹಾಗೂ ಶಿವ ಜಯಂತಿಯನ್ನು ಆಚರಣೆ ಮಾಡುತ್ತಾರೆ. ತಂದೆಯ ಮಹಿಮೆ ಬಹಳ ಮಾಡುತ್ತಾರೆ-ನೀವೇ ತಾಯಿ ತಂದೆ....... ಆದರೆ ಕೇವಲ ಇಷ್ಟು ಮಾತ್ರ ಹೇಳುತ್ತಾರೆ ಶಿವಾಯ ನಮಃ.......... ಆದರೆ ಅವರು ತಾಯಿ ತಂದೆ ಹೇಗೆ ಆಗಿದ್ದಾರೆ, ಆಸ್ತಿ ಹೇಗೆ ಕೊಡುತ್ತಾರೆ ಇದನ್ನು ಇಡೀ ಜಗತ್ತಿನಲ್ಲಿ ಯಾರೂ ತಿಳಿದುಕೊಂಡಿಲ್ಲ. ಇವರಂತು ಅದ್ಭುತ ವ್ಯಕ್ತಿ ಆಗಿದ್ದಾರೆ. ಶಿವಬಾಬಾ ನಿರಾಕಾರ ಆಗಿದ್ದಾರೆ. ಎಲ್ಲಿಯವರೆಗೂ ಶಿವಬಾಬಾರವರಿಗೆ ಶರೀರ ಸಿಗುವುದಿಲ್ಲವೊ ಅಲ್ಲಿಯವರೆಗೆ ಏನು ಮಾಡಲು ಸಾಧ್ಯ? ನಿರಾಕಾರ ಶಿವಬಾಬಾರವರ ಮಹಿಮೆಯನ್ನು ಹಾಡುತ್ತಾರೆ. ಅವರು ಇರುವ ಸ್ಥಾನವೂ ಶ್ರೇಷ್ಠಾತಿ ಶ್ರೇಷ್ಠ ಆಗಿದೆ. ಅದು ಯಾವ ಸ್ಥಾನ? ಮೂಲವತನ. ಬ್ರಹ್ಮಾ, ವಿಷ್ಣು, ಶಂಕರರು ಎಲ್ಲಿರುತ್ತಾರೆ? ಸೂಕ್ಷ್ಮವತನ. ಹಾಗೂ ಜಗದಂಬಾ ಇರುವ ಸ್ಥಾನ ಯಾವುದು? ಈ ಸ್ಥೂಲವತನ. ಇದನ್ನು ಎಲ್ಲರು ತಿಳಿದುಕೊಂಡಿದ್ದಾರೆ. ಜಗದಂಬಾ ಸಾಕಾರದಲ್ಲಿ ಇರುವವರಾಗಿದ್ದಾರೆ. ಜಗತ್ತು ಎಂದರೆ ಮನುಷ್ಯ ಸೃಷ್ಟಿ. ಜಗದಂಬಾ ಹೆಸರು ಬಹಳ ಚೆನ್ನಾಗಿದೆ ಆದರೆ ಅವರು ಯಾರು? ಎಲ್ಲಿಂದ ಬಂದರು? ಇದು ಯಾವುದನ್ನು ತಿಳಿದುಕೊಂಡಿಲ್ಲ. ಹೆಸರು, ಪರಿಚಯ, ತಿಳುವಳಿಕೆ ಹೇಗೆ ಸಿಗುತ್ತದೆ. ಅವಶ್ಯವಾಗಿ ಯಾರಾದರೂ ಮನುಷ್ಯ ಶರೀರದ ಮೂಲಕವೇ ಸಿಗಬೇಕು, ಯಾರಲ್ಲಿ ಪರಮಪಿತ ಪರಮಾತ್ಮ ಬರುತ್ತಾರೆ. ಹೇಗೆ ನಿರಾಕಾರ ಆತ್ಮಗಳು ಸಾಕಾರ ಶರೀರದಲ್ಲಿ ಬರುತ್ತೀರಿ. ಆತ್ಮ ಪ್ರಾಣಿಗಳಲ್ಲಿಯು ಇದೆ. ಆದರೆ ಅದಕ್ಕೆ ಯಾವುದೇ ಮಹಿಮೆಯಿಲ್ಲ. ಯಾರ ಗಾಯನ ಆಗುತ್ತದೆ? ನಿರಾಕಾರ ಶಿವಬಾಬಾರವರದು. ಅವರು ಎಲ್ಲಿಯವರೆಗೆ ಬ್ರಹ್ಮಾರವರ ಶರೀರದಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೂ ಪಾತ್ರ ಮಾಡಲು ಸಾಧ್ಯವಿಲ್ಲ. ಕೇವಲ ಬ್ರಹ್ಮಾರವರ ಮಹಿಮೆ ಇಲ್ಲ. ಶರೀರದಲ್ಲಿ ಯಾವಾಗ ಪರಮಾತ್ಮ ಪ್ರವೇಶ ಮಾಡುತ್ತಾರೊ ಆಗ ಅವರ ಮಹಿಮೆ ಆಗುತ್ತದೆ. ತಂದೆ ಹೇಳುತ್ತಾರೆ ನನ್ನ ಮಹಿಮೆ ಎಲ್ಲರೂ ಮಾಡುತ್ತಾರೆ. ಪತಿತ ಪಾವನ ನಾನು. ನನಗೂ ಮನುಷ್ಯ ಶರೀರ ಬೇಕು. ಆದರೆ ನಾನು ಗರ್ಭದಲ್ಲಿ ಪ್ರವೇಶ ಮಾಡುವುದಿಲ್ಲ. ಶಿವ ಜಯಂತಿ ಆಚರಿಸುತ್ತಾರೆ, ಆದರೆ ಶಿವಬಾಬಾ ಯಾರ ಶರೀರದಲ್ಲಿ ಹಾಗೂ ಯಾವಾಗ ಬಂದರು? ಇದು ಯಾರಿಗೂ ಗೊತ್ತಿಲ್ಲ. ರಾತ್ರಿಯಲ್ಲಿ (ಅಜ್ಞಾನ ಅಂಧಕಾರದಲ್ಲಿ ಬಂದರು) ಬಂದರು ಆದರೆ ಯಾರ ಶರೀರದಲ್ಲಿ ಬಂದರು ಇದನ್ನು ಯಾರು ತಿಳಿದುಕೊಂಡಿಲ್ಲ. ಹಾಡುತ್ತಾರೆ ಭಗೀರಥ ಅರ್ಥಾತ್ ಭಾಗ್ಯಶಾಲಿ ರಥ. ಅವಶ್ಯವಾಗಿ ಮನುಷ್ಯ ಶರೀರಬೇಕಾಗಿದೆ. ಈ ಶರೀರದಲ್ಲಿ ಪರಮಪಿತ ಪರಮಾತ್ಮ ಪ್ರವೇಶ ಮಾಡುತ್ತಾರೆ. ಇದು ಎಷ್ಟು ಶ್ರೇಷ್ಠ ಕರ್ಮ ಆಗಿದೆ. ಈಗ ನೀವು ತಿಳಿದುಕೊಂಡಿದ್ದೀರಿ ಶಿವಬಾಬಾ ಬ್ರಹ್ಮಾರವರ ಶರೀರದ ಹೊರತು ಅನ್ಯ ಯಾವುದೇ ಶರೀರದಲ್ಲಿ ಬರಲು ಸಾಧ್ಯವಿಲ್ಲ. ಪರಮಪಿತ ಪರಮಾತ್ಮ ಬ್ರಹ್ಮಾರವರ ಮೂಲಕ ಬಂದು ಮನುಷ್ಯ ಸೃಷ್ಟಿಯನ್ನು ರಚನೆ ಮಾಡುತ್ತಾರೆ. ಯಾವಾಗ ಭಾರತ ಬಹಳ ದುಃಖಿ ಹಾಗೂ ಭ್ರಷ್ಟಾಚಾರಿ ಆಗುತ್ತದೆ ಆಗ ಪರಮಪಿತ ಪರಮಾತ್ಮ ಈ ಶರೀರದಲ್ಲಿ ಪ್ರವೇಶ ಮಾಡಿ ನಿಮ್ಮನ್ನು ಸುಖಿ, ಶ್ರೇಷ್ಠಾಚಾರಿಗಳನ್ನಾಗಿ ಮಾಡುತ್ತೇನೆ. ಈ ಭಗೀರಥದ ಹೊರತು ಶಿವಬಾಬಾರವರು ಏನೂ ಮಾಡಲು ಸಾಧ್ಯವಿಲ್ಲ. ಯಾರಿಗಾದರೂ ಶರೀರ ಬೇಕಲ್ಲವೇ! ಈ ಶರೀರ ಶಿವಬಾಬಾರವರದು ಆಗಿದೆ. ಈ ಶರೀರದ ಆಧಾರ ಇಲ್ಲದೆ ಶಿವಬಾಬಾರವರ ಆಸ್ತಿ ಪಡೆಯಲು ಸಾಧ್ಯವಿಲ್ಲ. ಗಾಯನವಿದೆ ಪ್ರಜಾಪಿತ ಬ್ರಹ್ಮಾ ಅಥವಾ ತ್ರಿಮೂರ್ತಿ ಬ್ರಹ್ಮಾ, ದೇವ-ದೇವ ಮಹಾದೇವ ಎಂದು ಹೇಳಲಾಗುತ್ತದೆ. ಇವರು ಮೂವರಲ್ಲಿ ಬ್ರಹ್ಮನ ಹೆಸರು ಶ್ರೇಷ್ಠ ಏಕೆ? ಬ್ರಹ್ಮಾ ಇಲ್ಲಿಯೇ ಇದ್ದಾರೆ. ಅವರ ರಥದಲ್ಲಿ ಶಿವಬಾಬಾ ಬರುತ್ತಾರೆ. ವಿಷ್ಣು, ಶಂಕರನನ್ನು ದೇವತೆ ಎಂದು ಹೇಳುತ್ತಾರೆ. ಒಳ್ಳೆಯದು, ಬ್ರಹ್ಮಾರವರನ್ನು ದೇವತೆ ಎಂದು ಹೇಳುವುದೇ? ಅವರು ಪ್ರಜಾಪಿತ ಬ್ರಹ್ಮಾ ಆಗಿದ್ದಾರೆ. ಮನುಷ್ಯ ಶರೀರವೇ ಬೇಕಲ್ಲವೆ? ಪ್ರಜಾಪಿತ ಬ್ರಹ್ಮಾರವರಿಂದ ಸೃಷ್ಟಿಯ ರಚನೆ ಎಂಬ ಮಹತ್ವ ಇದೆ. ಬ್ರಹ್ಮಾರವರ ಮೂಲಕವೇ ಬ್ರಾಹ್ಮಣರ ರಚನೆ ಆಗುತ್ತದೆ. ಇವರು ಎಷ್ಟು ದೊಡ್ಡ ವ್ಯಕ್ತಿ ಆಗಿದ್ದಾರೆ, ಆದರೆ ಎಷ್ಟು

ಸಾಧಾರಣ. ಇವರ ಜೀವನ ಎಷ್ಟು ಸರಳವಾಗಿದೆ ನೋಡಿ! ಎಷ್ಟು ನಿರಹಂಕಾರಿ ಆಗಿದ್ದಾರೆ. ಈಗ ನಿಮ್ಮ ಸೇವೆಯಲ್ಲಿ ಉಪಸ್ಥಿತರಾಗಿದ್ದಾರೆ. ನೋಡಿ! ಕುಳಿತು ಹೇಗೆ ಓದಿಸುತ್ತಿದ್ದಾರೆ. ನೀವೇನು ಓದುತ್ತಿದ್ದೀರಿ? ನೀವು ಹೇಳುತ್ತೀರಿ ನಾವು ರಾಜಯೋಗದ ವಿದ್ಯೆ ಓದುತ್ತಿದ್ದೇವೆ. ಯಾರು ಓದಿಸುತ್ತಿದ್ದಾರೆ? ಪರಮಪಿತ ಪರಮಾತ್ಮ. ಚಿಕ್ಕವರು, ದೊಡ್ಡವರು, ಯುವಕರು, ವೃದ್ಧರು ಎಲ್ಲರು ಓದುತ್ತಿದ್ದೀರಿ. ಇದು ಈಶ್ವರೀಯ ಕಾಲೇಜ್ ಆಗಿದೆ. ಮನುಷ್ಯರಿಂದ ದೇವತೆ ಅಥವಾ ವಿಶ್ವದ ಮಾಲಿಕರಾಗುವ ವಿದ್ಯೆ. ಇಲ್ಲಿ ನಾವು ಓದಲು ಬಂದಿದ್ದೇವೆ. ಅಥವಾ ವಿಶ್ವದ ರಾಜ್ಯಭಾಗ್ಯ ಪಡೆಯಲು ಬಂದಿದ್ದೇವೆ. ಲಕ್ಷ್ಮೀ-ನಾರಾಯಣರು ವಿಶ್ವದಲ್ಲಿ ರಾಜ್ಯ ಮಾಡುತ್ತಿದ್ದಾಗ ಯಾವುದೇ ಧರ್ಮಗಳು ಇರಲಿಲ್ಲ. ಖಂಡಗಳು ಇರಲಿಲ್ಲ. ಒಂದೇ ಭರತ ಖಂಡ ಇತ್ತು ಈಗ ಪುನಃ ಈ ಪ್ರಾಪ್ತಿ ಪಡೆದುಕೊಳ್ಳಲು ಇಲ್ಲಿ ಕುಳಿತಿದ್ದೀರಿ. ಈ ವಿದ್ಯೆಯ ಹೊರತಾಗಿ ನೀವು ವಿಶ್ವದ ಮಾಲಿಕರು ಆಗಲು ಸಾಧ್ಯವಿಲ್ಲ. ಭಾರತ ಶಿವಾಲಯ ಆಗಲು ಸಾಧ್ಯವಿಲ್ಲ. ಶಿವಬಾಬಾರವರಿಗೆ ಗಾಯನವಿದೆ ನಿರಾಕಾರಿ, ನಿರಹಂಕಾರಿ ಎಂದು. ಎಲ್ಲಿಯವರೆಗೆ ಈ ಶರೀರದಲ್ಲಿ ಪ್ರವೇಶ ಮಾಡುವುದಿಲ್ಲವೋ ಅಲ್ಲಿಯವರೆಗೆ ನಿರಾಕಾರಿತನವನ್ನು ಹೇಗೆ ತೋರಿಸಿಕೊಳ್ಳುವುದು. ಎಷ್ಟು ಮಹಿಮೆಗಳಿವೆ. ಅಕಾಲಮೂರ್ತಿ ಆಗಿದ್ದಾರೆ ಆದರೆ ಸತ್ತವರನ್ನು ಬದುಕಿಸುತ್ತಾರೆ ಎಂದಲ್ಲ. ನೀವು ಮಕ್ಕಳಿಗೆ ಬಹಳ ನಶೆ ಇರಬೇಕು ನಮಗೆ ಪರಮಪಿತ ಪರಮಾತ್ಮ ತಂದೆ ಓದಿಸುತ್ತಾರೆಂದು. ಶಿವ ಅಥವಾ ವಿಷ್ಣು ಪ್ರಜಾಪಿತ ಆಗಿದ್ದಾರೆ ಎಂದಲ್ಲ ಇದು ಸಾಧ್ಯವಿಲ್ಲ. ಬ್ರಹ್ಮಾ ಇಡೀ ಮನುಷ್ಯ ಸೃಷ್ಟಿಯ ಪಿತಆಗಿದ್ದಾರೆ. ಹಾಗೂ ಆತ್ಮಗಳ ಪಿತ ಶಿವಬಾಬಾ ಆದರೆ ಆ ತಂದೆಯನ್ನು ಯಾರೂ ತಿಳಿದುಕೊಂಡಿಲ್ಲ. ತಾನು ಆತ್ಮ ಎಂಬುದನ್ನೇ ತಿಳಿದುಕೊಂಡಿಲ್ಲ. ಹೇಳುತ್ತಾರೆ ಪುಣ್ಯಾತ್ಮ, ಪಾಪಾತ್ಮ ಮತ್ತೆ ಏಕೆ ಹೇಳಬೇಕು ನಾನೇ ಪರಮಾತ್ಮ ಎಂದು ಎಷ್ಟು ಮೋಸ ಆಗಿದೆ. ನೀವು ಮಕ್ಕಳಿಗೆ ಗೊತ್ತಿದೆ ಐದು ಸಾವಿರ ವರ್ಷದ ಮೊದಲು ಶಾಂತಿ, ಪವಿತ್ರತೆ, ಸಂಪತ್ತು ಎಲ್ಲವೂ ಇತ್ತು. ಈಗ ತಂದೆ ಹೇಳುತ್ತಾರೆ ನಾನು ಬಂದು ಎಲ್ಲರಿಗೂ ಜ್ಞಾನ ನೀಡುತ್ತೇನೆ. ಇದರ ಮೊದಲು ನೀವು ಏನೂ ತಿಳಿದುಕೊಂಡಿರಲಿಲ್ಲ. ಈಗ ಎಲ್ಲವನ್ನೂ ತಿಳಿದುಕೊಂಡಿದ್ದೀರಿ. ತಂದೆಯ ಜೀವನ ಚರಿತ್ರೆಯನ್ನು ತಂದೆಯಿಂದಲೇ ತಿಳಿದುಕೊಳ್ಳಬೇಕು. ಈಗ ನಿರಾಕಾರನ ಜೀವನ ಚರಿತ್ರೆ ಹೇಗೆ ಸಾಧ್ಯ. ಯಾವಾಗ ಸಾಕಾರದಲ್ಲಿ ಬರುತ್ತಾರೆಯೋ ಆಗಲೇ ಜೀವನ ಚರಿತ್ರೆ ಸಾಧ್ಯ. ಕೇವಲ ಆತ್ಮನ ಜೀವನ ಚರಿತ್ರೆ ಸಾಧ್ಯ ಇಲ್ಲ. ಜೀವಾತ್ಮಗಳು ಆದಾಗ ಪುನರ್ಜನ್ಮದಲ್ಲಿ ಬರುತ್ತೀರಿ ಆಗ ಜೀವನ ಚರಿತ್ರೆ ಆಗುತ್ತದೆ. ಲೌಕಿಕದಲ್ಲಿ ಹೇಳುತ್ತಾರೆ 84 ಲಕ್ಷ ಜೀವರಾಶಿಗಳಲ್ಲಿ ಬರುತ್ತಾರೆ ಎಂದು ಆದರೆ ತಂದೆ ಹೇಳುತ್ತಾರೆ 84 ಲಕ್ಷ ಜನ್ಮ ಇರಲು ಸಾಧ್ಯವಿಲ್ಲ. ಇದೆಲ್ಲವೂ ಅಸತ್ಯ ಆಗಿದೆ. ಸ್ವಯಂ ತಂದೆ ಹೇಳುತ್ತಾರೆ ನಾನು ಬ್ರಹ್ಮನ ಶರೀರದಲ್ಲಿ ಬಂದು ನಿಮಗೆ ಎಲ್ಲಾ ವೇದ ಶಾಸ್ತ್ರಗಳ ಸಾರವನ್ನು ತಿಳಿಸುತ್ತೇನೆ. ಜೊತೆ ಜೊತೆಗೆ ರಾಜಯೋಗ ಕಲಿಸುತ್ತೇನೆ. ರಚಯಿತ ರಚನೆಯ ಆದಿ, ಮಧ್ಯ, ಅಂತ್ಯದ ರಹಸ್ಯವನ್ನು ತಿಳಿಸುತ್ತೇನೆ. ಯಾವಾಗ ದೊಡ್ಡ ದೊಡ್ಡ ಋಷಿ ಮುನಿಗಳೇ ತಿಳಿದುಕೊಂಡಿರಲಿಲ್ಲ ಅಂದಮೇಲೆ ಅವರ ನಂತರದವರು ಹೇಗೆ ತಿಳಿದುಕೊಳ್ಳಲು ಸಾಧ್ಯ. ನೋಡಿ ದೊಡ್ಡವರಲ್ಲಿ ದೊಡ್ಡ ವ್ಯಕ್ತಿ (ಬ್ರಹ್ಮಾ ಬಾಬಾ) ಎಷ್ಟು ಸರಳವಾಗಿದ್ದಾರೆ. ಶ್ರೇಷ್ಠಾತಿ ಶ್ರೇಷ್ಠ ವಜ್ರಗಳನ್ನಾಗಿ ಮಾಡುವವರು ತಂದೆಯಾಗಿದ್ದಾರೆ. ಇವರು ಆ ತಂದೆಯು ಇರುವ ಡಬ್ಬಿ (ಬಾಕ್ಸ್) ಆಗಿದ್ದಾರೆ, ರಥ ಎಂದಾದರೂ ಹೇಳಿ, ಹಳೆಯ ಚಪ್ಪಲಿ ಎಂದಾದರೂ ಹೇಳಿ. ಎಲ್ಲದಕ್ಕಿಂತ ಹಳೆಯ ಚಪ್ಪಲಿ (ಶರೀರ) ಇದಾಗಿದೆ. ಮೊಟ್ಟ ಮೊದಲು ಆತ್ಮ ಬಂದಾಗ ಸಂಪೂರ್ಣ ನಂಬರ್ವನ್ ಆಗಿತ್ತು. ಶ್ರೀ ನಾರಾಯಣನನ್ನು ನಂಬರ್ವನ್ ಎಂದು ಹೇಳಲಾಗುತ್ತದೆ. ಶ್ರೀ ಲಕ್ಷ್ಮಿಯು ಜೊತೆಯಲ್ಲಿದ್ದಾರೆ, ಅವರು ಪೂರ್ವಜನ್ಮದಲ್ಲಿ ಬಂದಿದ್ದಾರೆ. ಮೊದಲು ಸೂರ್ಯವಂಶಿ ನಂತರೆ ಚಂದ್ರವಂಶಿ . . . ಹೀಗೆ 84 ಜನ್ಮ ಪಡೆದಿದ್ದೀರಿ. 84 ಜನ್ಮದ ಮಾತೇ ಇಲ್ಲ 84 ಲಕ್ಷ ಜನ್ಮಗಳು ಎಂದು ಬರೆದ ಕಾರಣ ಕಲ್ಪದ ಆಯುಷ್ಯವನ್ನು ಲಕ್ಷಾಂತರ ವರ್ಷಗಳು ಎಂದು ಕರೆದರು. ಒಂದುವೇಳೆ ಲಕ್ಷಾಂತರ ವರ್ಷಗಳು ಆಗಿದ್ದೇ ಆದರೆ ಭಾರತವಾಸೀ ಹಿಂದೂಗಳ ಸಂಖ್ಯೆಯು ಹೆಚ್ಚಾಗಿ ಇರಬೇಕಿತ್ತು. ಆದರೆ ಅವರ ಸಂಖ್ಯೆ ಇನ್ನೂ ಕಡಿಮೆ ಇದೆ. ಭಾರತದ ದೇವಿ ದೇವತಾ ಧರ್ಮ ಪ್ರಾಯಃಲೋಪ ಆಗಿದೆ. ಯಾರೂ ತನ್ನನ್ನು ದೇವತೆಗಳು ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ದೇವತೆಗಳು ಸರ್ವಗುಣ ಸಂಪನ್ನರು ಆಗಿದ್ದರು. ಆದರೆ ಅವರು ಈಗ ಇಲ್ಲ. ಇದು ರಾವಣ ರಾಜ್ಯವಾಗಿದೆ ರಾಮ ರಾಜ್ಯವಲ್ಲ. ಜಗತ್ತಿನ ಮನುಷ್ಯರು ರಾಮನ ಹಾಗೂ ರಾವಣನ ಜೀವನ ಚರಿತ್ರೆಯನ್ನೇ ತಿಳಿದುಕೊಂಡಿಲ್ಲ. ದಿನ ಪ್ರತಿದಿನ ರಾವಣನ ಪ್ರಭಾವ ಹೆಚ್ಚುತ್ತಿದೆ. ಜಗತ್ತು ಪತಿತ ಆಗುತ್ತಿದೆ. 16 ಕಲೆಯು ಕಡಿಮೆಯಾಗುತ್ತಾ ಈಗ ಕಲಾ ಹೀನರು ಆಗಿದ್ದಾರೆ. ಎಲ್ಲರೂ ಹೇಳುತ್ತಾರೆ ನಾನು ನಿರ್ಗುಣಿ, ನನ್ನಲ್ಲಿ ಯಾವುದೇ ಗುಣಗಳಿಲ್ಲ, ನೀವೇ ದಯೆ ತೋರಿಸಬೇಕು ಎಂದು. ಸರ್ವಗುಣ ಸಂಪನ್ನ 16 ಕಲಾ ಸಂಪನ್ನ ಆಗುತ್ತೇವೆ. ಭಾರತ ಮೊದಲು ಫರಿಸ್ತಾನ ಆಗಿತ್ತು. ಹೇಳುವಾಗ ಮಾತ್ರ ಹೇಳುತ್ತಾರೆ, ಆದರೆ ಸೃಷ್ಟಿ ಚಕ್ರವನ್ನು ಯಾರೂ ತಿಳಿದುಕೊಂಡಿಲ್ಲ. ತಂದೆ ಹೇಳುತ್ತಾರೆ - ಮಾಯೆ ನಿಮ್ಮನ್ನು ತುಚ್ಛ ಬುದ್ಧಿಯವರನ್ನಾಗಿ ಮಾಡಿ ಬಿಟ್ಟಿದೆ. ತಮ್ಮಲ್ಲಿ ಎಷ್ಟೊಂದು ಅಹಂಕಾರವಿದೆ.

ನೀವು ಮಕ್ಕಳಿಗೆ ತಂದೆ ಹೇಳುತ್ತಾರೆ - ಮಧುರ ಮಕ್ಕಳೇ ನೀವು ರಾಮನನ್ನು ನೆನಪು ಮಾಡಿದರೆ ಮಾಲೆಯ ಮಣಿಗಳಾಗುತ್ತೀರಿ. ರುದ್ರ ಮಾಲೆಯ ನಂತರ ವಿಷ್ಣು ಮಾಲೆ, ಭಕ್ತರ ಮಾಲೆಯಲ್ಲಿ ಭಕ್ತರ ಮಹಿಮೆಯಾಗುತ್ತದೆ. ಇದೇ ರುದ್ರಮಾಲೆ ವಿಷ್ಣು ಮಾಲೆಯಾಗುತ್ತದೆ ಅರ್ಥಾತ್ ವಿಷ್ಣುವಿನ ರಾಜ್ಯದಲ್ಲಿ ಬರುತ್ತೀರಿ. ಇದು ಎಷ್ಟು ಶ್ರೇಷ್ಠ ಜ್ಞಾನ ಆಗಿದೆ. ಸನ್ಯಾಸವು ಎರಡು ರೀತಿಯದ್ದಾಗಿದೆ. ಅದು ಹಠಯೋಗ ಸನ್ಯಾಸ, ಕರ್ಮ ಸನ್ಯಾಸ ಮಾಡಲು ಸಾಧ್ಯವಿಲ್ಲ. ಕರ್ಮದ ಹೊರತು ಮನುಷ್ಯರು ಇರಲು ಸಾಧ್ಯವಿಲ್ಲ. ಪ್ರಾಣಾಯಾಮ ಮಾಡುತ್ತಾರೆ ಇದು ಕರ್ಮವೇ ಆಗಿದೆ. ಹೀಗೆ ಅನೇಕ ರೀತಿಯ ಅಭ್ಯಾಸಗಳು ಇದೆ. ಅದು ಯಾವುದೂ ರಾಜಯೋಗ ಅಲ್ಲ, ಅದು ಹಠಯೋಗ, ಹದ್ದಿನ ಸನ್ಯಾಸವಾಗಿದೆ. ಅದೂ ಸಹ ಭಾರತದ ಪವಿತ್ರ ಧರ್ಮ ಆಗಿದೆ.

ಆದರೆ ದೇವಿ ದೇವತೆಗಳಷ್ಟು ಪವಿತ್ರ ಧರ್ಮ ಬೇರೆ ಯಾವುದೂ ಇಲ್ಲ. ಅಲ್ಲಿ (ಸತ್ಯಯುಗದಲ್ಲಿ) ಸನ್ಯಾಸ ಮಾಡಲು ಅಗತ್ಯವೇನೂ ಇಲ್ಲ ಏಕೆಂದರೆ ಆತ್ಮ ಪವಿತ್ರ ಇರುವುದರಿಂದ ಶರೀರವು ಪವಿತ್ರ ಆಗಿರುತ್ತದೆ. ಆತ್ಮದಲ್ಲಿಯೇ ತುಕ್ಕು ಹಿಡಿಯುತ್ತದೆ. ಕಲೆ ಕಡಿಮೆ ಆಗುತ್ತಾ ಆಗುತ್ತಾ ಪತಿತ ಆಗುತ್ತೀರಿ. ಈಗ ಎಲ್ಲ ಆತ್ಮಗಳು ಕಬ್ಬಿಣದ ಯುಗದಲ್ಲಿದ್ದಾರೆ. ಎಲ್ಲರೂ ಕಪ್ಪಾಗಿದ್ದಾರೆ. ಆತ್ಮ ಪವಿತ್ರ ಆಗಿದ್ದಾಗ ಶೃಂಗಾರ ಆಗಿತ್ತು. ಕೃಷ್ಣನ ಚಿತ್ರವನ್ನು ಕಪ್ಪು ಹಾಗೂ ಬಿಳಿ ಬಣ್ಣಗಳೆರಡರಲ್ಲೂ ಮಾಡುತ್ತಾರೆ. ಈಗ ನೀವೆಲ್ಲರೂ ಶಾಮ ಸುಂದರರು ಆಗಿದ್ದೀರಿ. ಮೊದಲು ಭಾರತ ಚಿನ್ನದ ಸಮಾನ ಇತ್ತು. ಈಗ ಕಬ್ಬಿಣದ ಸಮಾನ ಆಗಿದೆ. ಈಗ ತಂದೆ ಜ್ಞಾನಚಿತೆಯಲ್ಲಿ ನಮ್ಮನ್ನು ಕೂರಿಸಿ ಸುಂದರರನ್ನಾಗಿ ಮಾಡುತ್ತಿದ್ದಾರೆ. ಈಗ ಮುಕ್ತಿ ಹಾಗೂ ಜೀವನ್ಮುಕ್ತಿ ಬೇಕೆಂದರೆ ವಿಕಾರಗಳ ಬಂಧನವನ್ನು ಸಮಾಪ್ತಿ ಮಾಡಬೇಕು. ಪವಿತ್ರತೆಯ ರಾಖಿಯನ್ನು ಕಟ್ಟಿಕೊಳ್ಳಿರಿ. ಇದು ಈಗಿನ ಮಾತಾಗಿದೆ. ಯಾವಾಗ ನೀವು ಬ್ರಹ್ಮಾರವರ ಮಕ್ಕಳು ಆಗಿದ್ದೀರಿ ಬ್ರಾಹ್ಮಣರು ಆಗದ ಹೊರತು ಯಾರೂ ಇಲ್ಲಿ ಬರಲು ಸಾಧ್ಯವಿಲ್ಲ. ನೀವು ಬ್ರಹ್ಮಾ ಮುಖವಂಶಾವಳಿಗಳು ಆಗಿದ್ದೀರಿ. ಶಿವಬಾಬಾ ಹೇಳುತ್ತಾರೆ ನನ್ನನ್ನು ನಿರಾಕಾರಿ ರೂಪದಲ್ಲಿ ಮಹಿಮೆ ಮಾಡುತ್ತೀರಿ. ಆದರೆ ನಾನು ಶರೀರ ಇಲ್ಲದೆ ಏನು ಮಾಡಲು ಸಾಧ್ಯ. ಇವರ ಅಂತಿಮ ಜನ್ಮದಲ್ಲಿ ಬರುತ್ತೇನೆ. ಈಗ ಎಲ್ಲವೂ ವಿನಾಶ ಆಗಲೇ ಬೇಕು. ಬ್ರಹ್ಮಾರವರಿಂದ ಸ್ಥಾಪನೆ. ಯಾವುದರ ಸ್ಥಾಪನೆ? ಕಲಿಯುಗದ ಸ್ಥಾಪನೆ ಆಗಲು ಸಾಧ್ಯವಿಲ್ಲ. ಸ್ಥಾಪನೆ ಸತ್ಯಯುಗದ್ದು. ತಂದೆ ಹೇಳುತ್ತಾರೆ ನಾನು ಬರುವುದು ಸಂಗಮಯುಗದಲ್ಲಿ. ನೀವು ಬ್ರಾಹ್ಮಣರಿಗಾಗಿ ಇದು ಸಂಗಮಯುಗ ಆಗಿದೆ, ಬಾಕಿ ಉಳಿದವರೆಗೆಲ್ಲಾ ಕಲಿಯುಗ. ಈಗ ಎಲ್ಲರೂ ಘೋರ ಅಂಧಕಾರದಲ್ಲಿ ಇದ್ದಾರೆ. ಈ ಘೋರ ಅಂಧಕಾರವನ್ನು ತಂದೆ ಬಂದು ಪ್ರಕಾಶಮಯವಾಗಿ ಮಾಡುತ್ತಿದ್ದಾರೆ. ಮಕ್ಕಳಿಗೆ ಗೊತ್ತಿದೆ ತಂದೆ ವಿಚಿತ್ರ (ಅಶರೀರಿ) ಆಗಿದ್ದಾರೆ ಎಂದು. ಕೃಷ್ಣ ಚಿಕ್ಕ ಮಗು ಆದ್ದರಿಂದ ಏನೂ ತಿಳಿಸಿಕೊಡಲು ಸಾಧ್ಯವಿಲ್ಲ. ಕೃಷ್ಣನ ಆತ್ಮ ಭಿನ್ನ ನಾಮ ರೂಪದಲ್ಲಿ ಶಿವಬಾಬಾರವರಿಂದ ಎಲ್ಲವನ್ನು ತಿಳಿದುಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಅಂತಿಮ ಜನ್ಮದಲ್ಲಿ ಕೃಷ್ಣನಿಗೆ ಶ್ಯಾಮಸುಂದರ ಎಂದು ಹೇಳಲಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಬಾಪ್ದಾದಾರವರ ಸಮಾನ ನಿರಹಂಕಾರಿ ಹಾಗೂ ನಿರಾಕಾರಿ ಆಗಬೇಕಾಗಿದೆ.

2. ಮುಕ್ತಿ ಜೀವನ್ಮುಕ್ತಿಗಾಗಿ ಪವಿತ್ರತೆಯ ರಾಖಿಯನ್ನು ಕಟ್ಟಿಕೊಳ್ಳಬೇಕು. ಜ್ಞಾನ ಚಿತೆಯಲ್ಲಿ ಕುಳಿತುಕೊಳ್ಳಬೇಕಾಗಿದೆ.

ವರದಾನ: ಶಕ್ತಿಶಾಲಿ ಬ್ರೇಕ್ ಮೂಲಕ ಸೆಕೆಂಡಿನಲ್ಲಿ ವ್ಯಕ್ತ ಭಾವದಿಂದ ದೂರವಾಗುವಂತಹ ಅವ್ಯಕ್ತ ಫರಿಶ್ತಾ ಅಥವಾ ಅಶರೀರಿ ಭವ.

ನಾಲ್ಕೂ ಕಡೆ ಶಬ್ಧದ ವಾಯುಮಂಡಲವೇ ಇರಲಿ ಆದರೆ ತಾವು ಒಂದು ಸೆಕೆಂಡಿನಲ್ಲಿ ಪೂರ್ಣ ವಿರಾಮವನ್ನು ಇಡುತ್ತಾ, ವ್ಯಕ್ತ ಭಾವದಿಂದ ದೂರವಾಗಿ ಬಿಡಿ, ಬ್ರೇಕ್ ಸಂಪೂರ್ಣವಾಗಿ ಹಿಡಿತದಲ್ಲಿ ಬಂದು ಬಿಟ್ಟಾಗ ಅವ್ಯಕ್ತ ಫರಿಶ್ತಾ ಅಥವಾ ಅಶರೀರಿ ಎಂದು ಹೇಳಲಾಗುವುದು - ಈ ಅಭ್ಯಾಸದ ಅವಶ್ಯಕತೆಯು ವರ್ತಮಾನದಲ್ಲಿ ಬಹಳಷ್ಟಿದೆ. ಏಕೆಂದರೆ ಇದ್ದಕ್ಕಿದ್ದಂತೆಯೇ ಪ್ರಕೃತಿಯ ಆಪತ್ತುಗಳು ಬರುವುದಿದೆ, ಆ ಸಮಯದಲ್ಲಿ ಬುದ್ಧಿ ಎಲ್ಲಿಗೂ ಹೋಗಬಾರದು, ಕೇವಲ ತಂದೆ ಹಾಗೂ ನಾನು ಅಷ್ಟೇ. ಬುದ್ಧಿಯನ್ನು ಎಲ್ಲಿ ಜೋಡಣೆ ಮಾಡಿಸಬೇಕೆಂದು ಬಯಸುತ್ತೀರೋ ಅಲ್ಲಿಯೇ ಜೋಡಣೆಯಾಗಲಿ - ಇದಕ್ಕಾಗಿ ಸಮಾವೇಶ ಮಾಡಿಕೊಳ್ಳುವ ಹಾಗೂ ಸಂಕೀರ್ಣತೆಯ ಶಕ್ತಿಯಿರಬೇಕು. ಹೀಗಿದ್ದಾಗ ಹಾರುವ ಕಲೆಯಲ್ಲಿ ಹೋಗಲು ಸಾಧ್ಯವಾಗುವುದು.

ಸ್ಲೋಗನ್: ಖುಷಿಯ ಔಷಧಿಯನ್ನು ಸೇವಿಸುತ್ತೀರೆಂದರೆ, ಮನಸ್ಸು ಹಾಗೂ ಬುದ್ಧಿಯು ಶಕ್ತಿಶಾಲಿ ಆಗಿ ಬಿಡುವುದು.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ - `ಪ್ರಪಂಚದಲ್ಲಿ ಅನೇಕ ಪ್ರಕಾರಗಳ ಮತಗಳಿಗಿಂತ ಶ್ರೇಷ್ಠ ಮತ ಪರಮಾತ್ಮನ ಮತ''

ಈ ಪ್ರಪಂಚದಲ್ಲಿ ಮೂರು ಪ್ರಕಾರದ ಮತಗಳಿವೆ - 1. ಮನ ಮತ, 2. ಗುರು ಮತ, 3. ಶಾಸ್ತ್ರ ಮತ. ಈಗ ವಿಚಾರ ಮಾಡುವ ಮಾತೇನೆಂದರೆ - ಮನ ಮತ, ಗುರು ಮತ ಅಥವಾ ಶಾಸ್ತ್ರ ಮತ, ಇವೆಲ್ಲವೂ ಆತ್ಮರ ಮತವಾಗಿದೆ, ದೇವತೆಗಳದಲ್ಲ ಹಾಗೂ ಪರಮಾತ್ಮನ ಮತವಲ್ಲ. ಯಾವುದೇ ದೇವತೆಯ ಮತ ಸಿಗುತ್ತದೆಯೆಂದರೂ, ಅದೂ ಸಹ ಮನುಷ್ಯ ಆತ್ಮನ ಮತವಾಯಿತು. ಆದರೆ ದೇವತೆಗಳಂತು ಸರ್ವಗುಣ ಸಂಪನ್ನ, 16 ಕಲಾ ಸಂಪೂರ್ಣರಾಗಿದ್ದಾರೆ, ಅವರಿಗೆ ಗುರು ಮತ ಅಥವಾ ಶಾಸ್ತ್ರ ಮತದ ಅವಶ್ಯಕತೆಯಿಲ್ಲ. ಅವರಿಗೆ ಗುರುಗಳ ಅವಶ್ಯಕತೆಯೂ ಇರಲಿಲ್ಲ. ಗುರುಗಳನ್ನಾಗಿ ಮಾಡಿಕೊಳ್ಳುವುದಂತು ಸದ್ಗತಿಗಾಗಿ,

ಅಂದಮೇಲೆ ಯಾರು ಅದೋಗತಿಯಲ್ಲಿ ಇದ್ದಾರೆಯೋ ಅವರು ಗುರುಗಳನ್ನು ಮಾಡಿಕೊಳ್ಳಬಹುದು. ಆದರೆ ಸತ್ಯಯುಗ ತ್ರೇತಾದಲ್ಲಿ ಅದೋಗತಿ ಇರಲಿಲ್ಲ ಅಲ್ಲವೆ! ಹಾಗಾದರೆ ಅಲ್ಲಿ ಗುರುಗಳನ್ನಾಗಿ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ಸತ್ಯವಾದ ಗುರುವಂತು ವಾಸ್ತವದಲ್ಲಿ ಒಬ್ಬ ಪರಮಾತ್ಮನಾಗಿದ್ದಾರೆ, ಅವರು ಸರ್ವ ಆತ್ಮರುಗಳಿಗೆ ಸದ್ಗತಿ ಕೊಡುವುದಕ್ಕಾಗಿ ಡ್ರಾಮಾದ ಅಂತ್ಯದಲ್ಲಿ ಬರುತ್ತಾರೆ. ಉಳಿದೆಲ್ಲರೂ ಹೆಸರಿಗಷ್ಟೇ ಗುರುವಾಗಿದ್ದಾರೆ ಏಕೆಂದರೆ ಯಾವುದೇ ಮನುಷ್ಯ ಆತ್ಮನು ಮುಕ್ತಿ ಹಾಗೂ ಜೀವನ್ಮುಕ್ತಿಯ ಮಾರ್ಗವನ್ನು ತಿಳಿಸಲು ಸಾಧ್ಯವಿಲ್ಲ. ದೇವತೆಗಳೂ ಸಹ ಮನುಷ್ಯರಿಂದ ದೇವತೆಗಳಾಗಿದ್ದಾರೆ, ಆದರೆ ಅವರು ಮೂರನೇ ಕಣ್ಣಿರುವ ಅಥವಾ ನಾಲ್ಕು ಭುಜಗಳಿರುವವರಲ್ಲ. ಜನರಂತು ಈ ರೀತಿ ತಿಳಿಯುತ್ತಾರೆ - ದೇವತೆಗಳಂತು ಮನುಷ್ಯರಿಗಿಂತ ಭಿನ್ನವಾಗಿರಬಹುದು ಎಂದು. ಹೌದು ಇದೇ ಭಿನ್ನತೆಯಿದೆ - ಅವರು 16 ಕಲಾ ಸಂಪೂರ್ಣರಾಗಿರುವ ಕಾರಣ ಬಹಳ ಪವಿತ್ರವಾಗಿದ್ದಾರೆ, ಅವರ ಸಂಸ್ಕಾರವು ಶುದ್ಧವಾಗಿತ್ತು. ಆದರೆ ಮನುಷ್ಯರಂತು ಮನುಷ್ಯರೇ ಆಗಿದ್ದರು. ಯಾವಾಗ ಮನುಷ್ಯನಲ್ಲಿ ದೈವೀ ಗುಣ ಇರುತ್ತದೆಯೋ ಆಗ ಅವರಿಗೆ ದೇವತೆಗಳೆಂದು ಹೇಳುತ್ತಾರೆ. ಈಗ ನಮಗೆ ಈ ಮತವು ಪರಮಾತ್ಮನ ಮೂಲಕ ಸಿಗುತ್ತಿದೆ, ನಾವು ಮನುಷ್ಯ ಮತ ಅಥವಾ ಗುರು ಮತದಂತೆ ನಡೆಯುವುದಿಲ್ಲ. ನಾವು ಪರಮಾತ್ಮನ ಮತದ ಅನುಸಾರ ನಡೆಯುತ್ತಿದ್ದೇವೆ, ಎಲ್ಲಾ ಆತ್ಮರುಗಳಿಗಿಂತ ಪರಮಾತ್ಮನ ಮತವು ಅವಶ್ಯವಾಗಿ ಶ್ರೇಷ್ಠ ಮತವಾಗಿರುವುದು. ಒಳ್ಳೆಯದು. ಓಂ ಶಾಂತಿ.